ಈ ದಿನ ದಿನಾಂಕಃ 21.07.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**<u>ಮುಂದುವರೆದ ಪಾಟೀಸವಾಲು ವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ</u>**

10. ಪಾರ್ವತಮ್ಮನಿಗೆ ಸೀತಮ್ಮ, ಸೀತಮ್ಮನವರ ಗಂಡ ರಾಜಪ್ಪ, ಅವರ ಮಕ್ಕಳನ್ನು ಹೊರತು ಪಡಿಸಿ ಬೇರೆ ಯಾರು ವಾರಸುದಾರರು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾರಸುದಾರರುಇದ್ದಾರೆಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಪಾರ್ವತಮ್ಮನವರ ಅಕ್ಕತಂಗಿಯರು ಬೇರೆ ಊರಿನಲ್ಲಿದ್ದಾರೆ ಅವರ ಹೆಸರು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪಾರ್ವತಮ್ಮನವರ ಇತರೆ ವಾರಸುದಾರರ ವಿಚಾರ ನನಗೆ ವೈಯಕ್ತಿಕವಾಗಿ ತಿಳಿದಿಲ್ಲ ಎಂದರೆ ಸರಿ. ದಾವಾ ಬಿ ಮತ್ತು ಸಿ ಷೆಡ್ಯೂಲ್ ಆಸ್ತಿಯ ಉತ್ತರ ಭಾಗಕ್ಕೆ ಉಳಿದ ಸರ್ವೆ ನಂ.1/3ರ ಆಸ್ತಿಯು ಸೀತಮ್ಮ ಮತ್ತು ಅವರ ಮಕ್ಕಳ ಅನುಭವದಲ್ಲೆ ಇದೆ ಎಂದರೆ ಸರಿ. ಸುಮಾರು 20 ವರ್ಷಗಳಿಂದ ಸೀತಮ್ಮನವರ ಅನುಭವದಲ್ಲಿರುತ್ತದೆ ಅದರ ಪೂರ್ವದಲ್ಲಿ ಪಾರ್ತಮ್ಮನವರ ಅನುಭದಲ್ಲಿತ್ತು ಎಂದು ಸಾಕ್ಷಿ ನುಡಿಯುತ್ತಾರೆ.

11. ಪಾರ್ವತಮ್ಮನವರ ಮರಣ ನಂತರ ದಾವಾ ಆಸ್ತಿಗಳಲ್ಲಿ ಹಕ್ಕನ್ನು ಕೇಳಿ ಸೀತಮ್ಮ ಅವರ ಕುಟುಂಬದವರನ್ನು ಹೊರತು ಪಡಿಸಿ ಬೇರೆ ಯಾರು ಪ್ರಶ್ನಿಸಿರುವುದಿಲ್ಲ ಎಂದರೆ ಸರಿ. ನನ್ನ ಸ್ವಾದೀನದಲ್ಲಿ 13x70 ಅಡಿ ಆಸ್ತಿ ಸರ್ವೆ ನಂ. 1/3 ರಲ್ಲಿ ಇರುತ್ತದೆ. 13x90 ಅಡಿ ಇರುವುದಿಲ್ಲ. 70 ಅಡಿಗಳಗಿಂತ ಹೆಚ್ಚಾಗಿ ಕಂಡು ಬಂದಲ್ಲಿ ನಾವು ಸ್ಥಳವನ್ನು ಬಿಟ್ಟುಕೊಡಲು ಬದ್ಧರಿರುತ್ತೇವೆ. 13x70 ಅಡಿ ಆಸ್ತಿಯ ಮೊದಲ ಬಾರಿಗೆ ಪಾರ್ತಮ್ಮನವರಿಂದ ಆರ್ ಹಾಲಪ್ಪ ಬಿನ್ ರಂಗಪ್ಪನವರಿಗೆ 1986-87 ನೇ ಸಾಲಿನಲ್ಲಿ ಕ್ರಯ ಮಾಡಿರುತ್ತಾರೆ. 1986 ನೇ ಸಾಲಿನಲ್ಲಿ 42x70 ಅಡಿಗಳಷ್ಟು ಭೂಪರಿವರ್ತನೆ ಆಗಿರುತ್ತದೆ.

ಮುಂದುವರೆದ ಪಾಟೀಸವಾಲಿಗೆ ಪಕ್ಷಗಾರರು ಖುದ್ದು ಆರೋಗ್ಯ ಸರಿ ಇಲ್ಲದ ಕಾರಣ ಕಾಲಾವಕಾಶ ಕೋರಿದ್ದರಿಂದ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.